ಪೈಪೋಟಿಯೇ ಇರುವುದು ಸಹಜ. ವಿಶ್ವದ ನಂಬರ್ ಒನ್ ಬ್ರ್ಯಾಂಡ್ ಯಾವುದು ಎಂಬುದರ ಬಗ್ಗೆ ಎಲ್ಲರಿಗೂ ಕುತೂಹಲ ಮತ್ತು ಅದನ್ನು ತೊಡುವವರಿಗೆ ಎಲ್ಲಿಲ್ಲದ ಅಭಿಮಾನ ಇರುತ್ತದೆ. ಸದ್ಯದ ಮಾರುಕಟ್ಟೆಯಲ್ಲಿ, ಗಳಿಗೆಯ ದೃಷ್ಟಿಯಲ್ಲಿ 'ವಿ ಎಫ್ ಕಾರ್ಪೊರೇಷನ್' ಎಂಬ ಸಿದ್ಧ ಉಡುಪಿನ ಕಂಪನಿ 1380 ಕೋಟಿ ಡಾಲರ್‌ಗಳ ಮೌಲ್ಯ ಹೊಂದಿದ್ದು ನಂಬರ್ ಒನ್ ಸ್ಥಾನದಲ್ಲಿದೆ. ಅಲ್ಟ್ರಾ, ಈಗಲ್ ಕ್ರೀಕ್, ರೆಡ್ ಪಾಕ್, ಜಾನ್‌ಸ್ಪೋರ್ಟ್, ಕಿಪ್ಲಿಂಗ್ ಕೊಡಿಯಾಕ್, ಸ್ಮಾರ್ಟ್‌ವೂಲ್ ವಾನ್ಸ್, ವಾಲ್ಸ್‌ದ ನಾರ್ಥ್ ಫೇಸ್, ಟಿಂಬರ್‌ಲ್ಯಾಂಡ್, ಟೆರ್ರಾ, ವಿಎಫ್ ಸಲ್ಯೂಶನ್ಸ್ ಹೆಸರಿನ ತರೆಹೇವಾರಿ ಬ್ರ್ಯಾಂಡ್‌ಗಳು ವಿಎಫ್ ಕಾರ್ಪೊರೇಶನ್‌ಗೆ ನಂಬರ್ ಒನ್ ಸ್ಥಾನ ಕಲ್ಪಿಸಿವೆ. ಇವುಗಳ ಜೊತೆ ಕ್ರಿಶ್ಚಿಯನ್ ಡಿಯೋರ್, ಲುಯಿಸ್ ವಿಟೋನ್, ನೈಕಿ, ಜಾರ, ಅಡಿದಾಸ್, ಹೆಚ್ ಅಂಡ್ ಎಮ್, ಗ್ಯಾಪ್, ಯನಿಕ್ಲೊ, ರಾಲ್ಫ್ ಲಾರೆನ್, ಹರ್ಮಿಸ್‌ಗಳು ವಿಶ್ವ ಉಡುಪು ಉದ್ಯಮದ ಲಕ್ಸುರಿ ಬ್ರ್ಯಾಂಡ್‌ಗಳಾಗಿದ್ದು ಹಲವು ಬಿಲಿಯನ್ ಡಾಲರ್‌ಗಳ ಬಂಡವಾಳ ಮೌಲ್ಯ ಹೊಂದಿವೆ. ಇವುಗಳಲ್ಲಿ ಕೆಲವು ಮಹಿಳೆಯರ ಉಡುಗೆಗಳಿಗೆ ಮೀಸಲಾಗಿದ್ದರೆ, ಉಳಿದವು ಮಹಿಳೆ ಮತ್ತು ಪುರುಷರಿಬ್ಬರ ಉಡುಗೆಗಳನ್ನು ತಯಾರಿಸುತ್ತವೆ. ಸ್ವದೇಶಿ ಮೂಲದ ಖಾದಿ, ಕೈಮಗ್ಗದ ಉಡುಪುಗಳ ಜೊತೆಗೆ ರೇಮಂಡ್, ವ್ಯಾನ್ ಹ್ಯೂಸನ್, ಮಧುರಾ ಕೋಟ್ಸ್, ಅರವಿಂದ್ ಮಿಲ್ಸ್, ಬಾಂಬೆ ಡೈಯಿಂಗ್, ಲೂಯಿಸ್ ಫಿಲಿಪ್ಪಿ, ಪೀಟರ್ ಇಂಗ್ಲೆಂಡ್, ಮೈಸೂರು ಸಿಲ್ಕ್, ಕಾಂಚೀವರಂ, ತಿರುಪ್ಪೂರಿನ ಉತ್ಪನ್ನಗಳಿಗೂ ಭಾರೀ ಬೇಡಿಕೆಯಿದೆ.

ವರ್ಷ ವರ್ಷಕ್ಕೂ ಫ್ಯಾಷನ್ ಟ್ರೆಂಡ್ ಬದಲಾಗುತ್ತವೆ. ನಾವು ಹವಾಗುಣಕ್ಕನುಗುಣವಾಗಿ ಬಟ್ಟೆ ಧರಿಸುತ್ತೇವೆ. ಖ್ಯಾತನಾಮರು ಏನು ಧರಿಸುತ್ತಾರೆ ಎಂಬುದನ್ನು ಅನುಸರಿಸಿ ಉಡುಪು ಖರೀದಿಸುವವರೂ ಬಹು ಸಂಖ್ಯೆಯಲ್ಲಿದ್ದಾರೆ. ಪ್ರಸಿದ್ಧ ಫುಟ್‌ಬಾಲ್ ಆಟಗಾರ ಡೇವಿಡ್ ಬೆಕ್‌ಹ್ಯಾಮ್, ಗಿಗಾ ಹಡಿಡ್, ಜಾರ್ಜ್ ಕ್ಲೂನಿ, ಕಾರ್ಲೈ ಕ್ಲಾಸ್, ಲಿಯೋ ನಾರ್ಡೊ ಡಿಕ್ಯಾಪ್ರಿಯೊ, ಹಾಡುಗಾರ್ತಿ ಬಿಯೊನ್ಸ್, ಗಾಲ್ಫ್ ಕಿಂಗ್ ಟೈಗರ್ ವುಡ್ಸ್, ಕೆಂಡಾಲ್ ಜೆನ್ನರ್, ಜಾನ್ ಟ್ರವೋಲ್ಟ್, ಹೃತಿಕ್ ರೋಶನ್, ಅಮಿತಾಭ್ ಬಚ್ಚನ್ ಇವರೆಲ್ಲ ರೂಪದರ್ಶಿಗಳಾಗಿರುವ ವಿವಿಧ ಬಟ್ಟೆಯ ಬ್ರ್ಯಾಂಡ್‌ಗಳು ಮಾರುಕಟ್ಟೆಗೆ ಬರುವುದನ್ನೇ ಕಾಯುವ ಕೋಟ್ಯಂತರ ಅಭಿಮಾನಿ ಗ್ರಾಹಕರಿದ್ದಾರೆ. ಕೋಟ್ಯಂತರ ಡಾಲರ್ ಸಂಭಾವನೆ ಪಡೆಯುವ ಪ್ರಸಿದ್ಧ ರೂಪದರ್ಶಿಗಳು ತಮ್ಮ ಮೂಲ ಕ್ಷೇತ್ರದಲ್ಲಿ ಗಳಿಸುವ ಹಣಕ್ಕಿಂತ ಫ್ಯಾಷನ್ ಎಂಡಾರ್ಸ್‌ಮೆಂಟ್‌ಗಳಿಂದ ಗಳಿಸುವ ಹಣವೇ ಕೆಲವೊಮ್ಮೆ ಜಾಸ್ತಿ ಇರುತ್ತದೆ!

## ಫ್ಯಾಷನ್-ಪಾಯಿಸನ್

ಬಡವರ ಮಾನ ಮುಚ್ಚುವ, ಸಾಮಾನ್ಯರ ಸಹಜ ಸೌಂದರ್ಯ ಹೆಚ್ಚಿಸುವ, ಶ್ರೀಮಂತರ ಆಡಂಬರಕ್ಕೆ ಥಳುಕು ಬಳುಕಿನ ಮೆರಗು ನೀಡುವ ಫ್ಯಾಷನ್ ವಸ್ತ್ರೋದ್ಯಮದ ಹಿಂದೆ ಬೃಹತ್ ಪ್ರಮಾಣದ ಪರಿಸರ ನಾಶದ ಕಥೆಯಿದೆ. ಜನರ ಮೈಮುಚ್ಚಲು ಭೂಮಿ ತಾಯಿ ಬೆತ್ತಲಾಗುತ್ತಿದ್ದಾಳೆ. ವಿಶ್ವದಾದ್ಯಂತ ಲಕ್ಷಾಂತರ ಹೆಕ್ಟೇರ್ ಅರಣ್ಯ ನಾಶವಾಗುತ್ತಿದೆ, ಸರೋವರಗಳು ಬರಿದಾಗುತ್ತಿವೆ, ನದಿಗಳು ಕಲುಷಿತಗೊಳ್ಳುತ್ತಿವೆ, ಓಝೋನ್ ರಂಧ್ರಕ್ಕೆ ತೂತು ಬೀಳುತ್ತಿದೆ, ಉಸಿರಾಡುವ ಗಾಳಿ ವಿಷವಾಗುತ್ತಿದೆ. ಆರೋಗ್ಯ ಕೆಡಿಸುವ ಭಾರದ ಲೋಹಗಳು ನೀರಿನ ಮೂಲಗಳನ್ನು ಸೇರಿ ಮನುಷ್ಯನಿಗೆ ಮಾರಣಾಂತಿಕ ಕಾಯಿಲೆಗಳನ್ನು ಹಬ್ಬಿಸುತ್ತಿವೆ. ಬಟ್ಟೆಯ ಮಿಲ್ಲುಗಳ, ಗಾರ್ಮೆಂಟ್ ಫ್ಯಾಕ್ಟರಿಯ ಕೆಲಸಗಾರರ ಶ್ವಾಸಕೋಶಗಳು ದುರ್ಬಲವಾಗುತ್ತಿವೆ. ಕೋಟ್ಯಂತರ ಜನರ ಬದುಕಿಗೆ ಆಸರೆ ಕಲ್ಪಿಸುತ್ತಿರುವ ಜವಳಿ ಉದ್ಯಮ ಅದಕ್ಕಿಂತ ಹೆಚ್ಚಿನ ಜನಸಂಖ್ಯೆಯ ಬದುಕಿನ ಮೂಲಕ್ಕೇ ಕೊಡಲಿ ಏಟು ಹಾಕುತ್ತಿದೆ. ಶುದ್ಧ ಆಹಾರ, ಜೀವಿವೈವಿಧ್ಯಗಳೆಲ್ಲ ವಿನಾಶದ ಹಾದಿ ಹಿಡಿದಿವೆ. ವಸ್ತ್ರೋದ್ಯಮ ಉತ್ಪಾದಿಸುತ್ತಿರುವ ತ್ಯಾಜ್ಯದಿಂದ ಸಾಗರಗಳು ಕಲುಷಿತಗೊಂಡು ಜಲಚರಗಳು ನಿರಂತರ ಅಪಾಯ ಎದುರಿಸುತ್ತಿವೆ. ಉತ್ಪಾದನೆ, ಸಾಗಣೆ, ಮಾರುಕಟ್ಟೆ ಪ್ರವೇಶ, ಬಳಕೆಯ ಪ್ರತೀ ಹಂತದಲ್ಲೂ ಹೊಮ್ಮುವ ಅಗಾಧ ಕಲ್ಮಶ ನಮ್ಮ ನೈಸರ್ಗಿಕ ಸಂಪತ್ತಿನ ಸುಸ್ಥಿತಿಯನ್ನೇ ಬಲಿತೆಗೆದುಕೊಳ್ಳುವ ಹಂತ ತಲುಪಿದೆ.

ನಾವು ತೊಟ್ಟು ಬಿಸಾಡುವ ಪ್ರತಿ ಉಡುಪೂ ಪರಿಸರದ ಮೇಲೆ ಇನ್ನಿಲ್ಲದೆ ಹಾನಿ ಮಾಡುತ್ತದೆ. ಆದರೂ ದಿನಕ್ಕೆ ನೂರು ಹೊಸ ಮಾದರಿಯ ಬಟ್ಟೆ

### ರಾನಾ ಪ್ಲಾಜ಼ಾ ದುರಂತ

2013ರ ಏಪ್ರಿಲ್ 24ರ ಬೆಳಗಿನ 8.45ರ ಸಮಯ. ಬಾಂಗ್ಲಾದೇಶದ ರಾಜಧಾನಿ ಢಾಕಾದ ರಾನಾ ಪ್ಲಾಜಾದ ಎಂಟು ಅಂತಸ್ತಿನ ಗಾರ್ಮೆಂಟ್ ಫ್ಯಾಕ್ಟರಿಯಲ್ಲಿ ಸಂಭವಿಸಿದ ಕಟ್ಟಡ ಕುಸಿತದಿಂದ 1134 ಕಾರ್ಮಿಕರು ಸ್ಥಳದಲ್ಲೇ ಅಸುನೀಗಿದ್ದರು. 'ಕಟ್ಟಡದಲ್ಲಿ ಬಿರುಕು ಮೂಡಿದೆ, ಸರಿಪಡಿಸಿ' ಎಂದು ಸ್ಥಳೀಯ ಪ್ರಾಧಿಕಾರ ಎಚ್ಚರಿಸಿದ್ದರೂ ಅದನ್ನು ಲೆಕ್ಕಿಸದೆ ಕೆಲಸ ಮುಂದುವರೆಸಲಾಗಿತ್ತು. ಸ್ಥಳೀಯ ರಾಜಕಾರಣಿ ಸೊಹೆಲ್ ರಾನಾಗೆ ಸೇರಿದ ಪ್ಲಾಜಾದಲ್ಲಿ ಒಟ್ಟು ಐದು ಸಾವಿರ ಗಾರ್ಮೆಂಟ್ ಉದ್ಯೋಗಿಗಳು ಬೇರೆ ಬೇರೆ ವಿಭಾಗಗಳಲ್ಲಿ ಕೆಲಸ ಮಾಡುತ್ತಿದ್ದರು. ವಿಶ್ವದ ಖ್ಯಾತ ಬ್ರ್ಯಾಂಡ್‌ಗಳ ಬಟ್ಟೆಗಳನ್ನು ಪ್ಲಾಜಾದಲ್ಲಿ ಸಿದ್ಧಪಡಿಸಲಾಗುತ್ತಿತ್ತು. 'ಢಾಕಾ ಗಾರ್ಮೆಂಟ್ ಫ್ಯಾಕ್ಟರಿ ಕುಸಿತ' ಎಂದೇ ಪ್ರಸಿದ್ಧವಾಗಿರುವ ಇದು ವಸ್ತ್ರೋದ್ಯಮ ತಯಾರಿಕೆಯ ಇತಿಹಾಸದಲ್ಲೇ ಅತ್ಯಂತ ದೊಡ್ಡ ದುರಂತ ಎನ್ನಿಸಿಕೊಂಡಿದೆ.

